(6) ಕಡವುಗಳನ್ನು ಗುತ್ತಿಗೆಗೆ ಕೊಡತಕ್ಕ ಕಾಲಗಳನ್ನು ಕಮ್ಮಿ ಮಾಡಲು ಸಾಧ್ಯವಿಲ್ಲವೆಂದು ತಲಪಿದ 17-5-07ನೆ ಮರ್ಕ್ಯಂ 10774-5—L. B. (400-06)—2ನೆ ನಂಬರು ಗಾರ್ನ್ಮೆಂಟ್ ಆರ್ಡರು.

(7) ಡಿಸ್ಟ್ರಿಕ್ಟ್ ಬೋರ್ಡು ಮೆಂಬರುಗಳಿಗೂ ತಾಲ್ಲೂಕು ಬೋರ್ಡು ಮೆಂಬರುಗಳಿಗೂ ಟ್ರಾವಲಿಂಗ್ ಅಲೋಯನ್ಸ್ ವಿಚಾರದಲ್ಲಿ ಏನೂ ವ್ಯತ್ಯಾಸವಿರಕೂಡದೆಂತ ಬೆಂಗಳೂರು ಮತ್ತು ಮೈಸೂರು ಡಿಸ್ಟ್ರಿಕ್ಟ್ ಬೋರ್ಡುಗಳ ಅಭಿಪ್ರಾಯಗಳನ್ನು ರಿಕಾರ್ಡು ಮಾಡಿಕೊಂಡಿರುತ್ತೆಂತ ತಲ್ಪಿದ 15—6—07ನೆ ಮರ್ಕ್ಯಂ 11894-904—L. B. (173-06)—6ನೆ ನಂಬರ್ ಗಾರ್ನ್ಮೆಂಟ್ ಆರ್ಡರು.

(8) ಕೊಪ್ಪಾ-ಬಾಗಿ ರಸ್ತೆಯ ಪೈಕಿ 2¼ ಮೈಲಿಗಳನ್ನು ಸಾಲಾಬಾದು ರಿಪೇರಿ ಬಗ್ಯೆ ಪ್ರವಿಷಿಯಲ್ ಫಂಡ್ಸಿನಿಂದ ವಹಿಸಿರುವ ಸಬಬು ಉಳಿಯುವ 67½ ರೂಪಾಯಿಗಳನ್ನು ಇದೇ ರಸ್ತೆಯ ಪೈಕಿ ಡಿಸ್ಟ್ರಿಕ್ಟ್ ಫಂಡಿನಿಂದ ಸಾಲಾಬಾದು ರಿಪೇರಿಯಾ ಗುತ್ತಲಿರುವ 3¾ ಮೈಲಿಗಳಿಗೆ ಹಾಲಿ ಕೊಡುತ್ತಲಿರುವ ಮೈಲಿ ಒಂದರ 30 ರೂಪಾಯಿಗಳ ಗ್ರಾಂಟನ್ನು 48 ರೂಪಾಯಿಗಳಿಗೆ ಹೆಚ್ಚಿಸಲು ಉಪಯೋಗಿಸಬಹುದೆಂತ ತಲ್ಪಿದ 18—6—07ನೆ ಮರ್ಕ್ಯಂ 11976-8—L. B. (352-06)—6ನೆ ನಂಬರು ಗಾರ್ನ್ಮೆಂಟ್ ಆರ್ಡರು.

(9) ಸ್ಯ 1907—08ನೆ ಸಾಲು ಬಜ್ಜೆಟ್ಟನ್ನು ಹಾಸನದ ಡಿಸ್ಟ್ರಿಕ್ಟ್ ಬೋರ್ಡಿನವರು ತಯಾರುಮಾಡಿ ಕಳುಹಿಸಿರುವದನ್ನು ಅನುಸರಿಸಿ ಇತರೇ ಡಿಸ್ಟ್ರಿಕ್ಟ್ ಬೋರ್ಡುಗಳಲ್ಲಿಯೂ ತಯಾರುಮಾಡಿ ಕಳುಹಿಸಬೇಕೆಂತ ತಲ್ಪಿದ 24—6—07ನೆ ಮರ್ಕ್ಯಂ 12082-9—L. B. (489-06)—1ನೆ ನಂಬರ್ ಗಾರ್ನ್ಮೆಂಟ್ ಆರ್ಡರು.

(10) ಗ್ರಾಮಗಳ ಅಭಿವೃದ್ಧಿ ಬಗ್ಯೆ ಹಣ ವದಗಿಸುತ್ತಲಿರುವಂತಲೂ ಪ್ರತಿ ಬಂದು ಗ್ರಾಮಗಳ ಅವಶ್ಯಕತೆಯನ್ನು ನೋಡಿ ಈರೀತಿ ಮಾಡಬೇಕಾದ್ದು ಡಿಸ್ಟ್ರಿಕ್ಟ್ ಬೋರ್ಡಿನವರ ಕರ್ತವ್ಯವಾಗಿರುತ್ತೆಂತಲೂ ಈ ಬಗ್ಯೆ ಯಾವ ಕಟ್ಟಾದ ರೂಲ್ಸು ಮಾಡುವದಕ್ಕೂ ಸಾಧ್ಯವಿಲ್ಲವೆಂತಲೂ ಅವಶ್ಯಕತೆ ಬಿದ್ದಾಗ್ಯೆ ಗ್ರಾಮಗಳ ರೈತರು ಡಿಸ್ಟ್ರಿಕ್ಟ್ ಬೋರ್ಡಿನವರನ್ನು ಕೇಳಿಕೊಳ್ಳಬೇಕೆಂತಲೂ ಸಹ ತಲಪಿದ 15—7—07ನೆ ಮರ್ಕ್ಯಂ 455-63—L. B. (185-06)—11ನೆ ನಂಬರ್ ಗಾರ್ನ್ಮೆಂಟ್ ಆರ್ಡರು.

(11) ಪಟೇಲರುಗಳಿಗೆ ಬಹುಮಾನಗಳನ್ನು ಕೊಡತಕ್ಕ ಬಗ್ಯೆ ಕೊಟ್ಟ ಸರ್ಟಿಫಿಕೇಟುಗಳ ಮೇಲೆ ಬೆಂಗಳೂರು ಡಿಸ್ಟ್ರಿಕ್ಟ್ ಫಂಡು ಎಂಬದನ್ನು ಮುದ್ರಿಸಬೇಕೆಂದು ಬೆಂಗಳೂರು ಡಿಸ್ಟ್ರಿಕ್ಟ್ ಬೋರ್ಡಿನವರ ಅಭಿಪ್ರಾಯವನ್ನು ಅನುಮೋದಿಸಿರುತ್ತೆಂತ ತಲ್ಪಿದ 19—7—07ನೆ ಮರ್ಕ್ಯಂ 607-14—L. B. (463-06)—2ನೆ ನಂಬರು ಗಾರ್ನ್ಮೆಂಟ್ ಆರ್ಡರು.

23. ಮುಂದಿನ ಡಿಸ್ಟ್ರಿಕ್ಟ್ ಬೋರ್ಡು ಮೀಟಿಂಗ್ ಸೆಪ್ಟಂಬರ್ 25ನೆ ಬುಧವಾರ ನಡಿಯಬೇಕಾಗಿ ತೀರ್ಮಾನಿಸಲಾಯಿತು.

ಬಿ. ಜೆ. ಕೊವಾರಸ್ವಾಮಿ ನಾಯಕ,
ಪ್ರೆಸಿಡೆಂಟ್.

ಬೆಂಗಳೂರು ಸಬ್ ಜಡ್ಜಿಯವರ ಕೋರ್ಟಿನಲ್ಲಿ.

ಸ್ಯ 1907—08ನೆ ಇಸವಿ ಮಿ|| ಅರ್ಜೀ ನಂಬರು 311.

ನೆಲಮಂಗಲದ ತಾಲ್ಲೂಕು ಬೇಗೂರಿನಲ್ಲಿದ್ದು, ಮೃತಪಟ್ಟ ಚನ್ನನಂಜಂಡೈಯ್ಯನ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಬೆಂಗಳೂರಲ್ಲಿರುವ ಚನ್ನಕ್ರಿಷ್ಣಯ್ಯ, ಮೃತಪಟ್ಟ ಸದರೀ ನಂಜುಂಡೈಯ್ಯನವರಿಗೆ ಖಾಸಾ ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಬೇಗೂರಲ್ಲಿ ವಾಸಸ್ಥರಾಗಿ ಮೃತಪಟ್ಟ ನಂಜುಂಡೈಯ್ಯನವರ ಜಿಂದಗಿ ಬಗ್ಯಾಗಿ ಬರತಕ್ಕ ರೂಪಾಯಿ 48,373—1—4 ಸಾಲವನ್ನು ಏಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷ್ಯ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡುತ್ತಾರೆ.

ಸದರೀ ದರಖಾಸ್ತುದಾರರಾದ ಚನ್ನಕ್ರಿಷ್ಣಯ್ಯನವರ ಅರ್ಜಿಯನ್ನು ಸ್ಯ 1907ನೆ ಇಸವಿ ನವಂಬರು ತಿಂಗಳು 1ನೆ ತಾರೀಖು ಶುಕ್ರವಾರದಲ್ಲು ಕೇಳಿ ಸರ್ಟಿಫಿಕೇಟು ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಕೆ ಮಾಡಲ್ಪಡುತ್ತೆ. ಆಕಾಲದಲ್ಲಿ ಸದರೀ ಮೃತಪಟ್ಟ ನಂಜುಂಡೈಯ್ಯನವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರಿ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ಯ 1907ನೆ ಇಸವಿ ಅಕ್ಟೋಬರು ತಿಂಗಳು 4ನೆ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ಯ 1907—08ನೆ ಇಸವಿ ಮಿ|| ಅರ್ಜೀ ನಂಬರು 341.

ಆನೇಕಲ್ ತಾಲ್ಲೂಕು ಹೆನ್ನಾಗರವಲ್ಲಿದ್ದು, ಮೃತಪಟ್ಟ ರಡ್ಡಿ ಅವಲಪ್ಪನ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಬೆಂಗಳೂರು ತಾಲ್ಲೂಕು ಕೆಟ್ಟಪಾಳ್ಯದಲ್ಲಿರುವ, ಅವಲಪ್ಪನ ಮಗ 1ನೆ ಚಿನ್ನಪ್ಪ, 2ನೆ ಮುನಿವೆಂಕಟಪ್ಪ ಮೃತಪಟ್ಟ ಸದರೀ ಅವಲಪ್ಪನವರಿಗೆ ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ಹೆನ್ನಾಗರದಲ್ಲಿದ್ದು ವಾಸಸ್ಥರಾಗಿ ಮೃತಪಟ್ಟ ಅವಲಪ್ಪನ ಜಿಂದಗಿ ಬಗ್ಯಾಗಿ ಬರತಕ್ಕ ರೂಪಾಯಿ 386—8—0 ಸಾಲವನ್ನು ಏಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷ್ಯ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡುತ್ತಾರೆ.

ಸದರೀ ದರಖಾಸ್ತುದಾರರಾದ 1ನೆ ಚಿನ್ನಪ್ಪ, 2ನೆ ಮುನಿವೆಂಕಟಪ್ಪನವರ ಅರ್ಜಿಯನ್ನು ಸ್ಯ 1907ನೆ ಇಸವಿ ನವಂಬರು ತಿಂಗಳು ತಾರೀಖು 1ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಕೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಅವಲಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರಿ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ಯ 1907ನೆ ಇಸವಿ ಅಕ್ಟೋಬರು ತಿಂಗಳು 4ನೆ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ರ 1907—08ನೆ ಇಸವಿ ಮಿ॥ ಅರ್ಜೀ ನಂಬರ್ 356.

ಬೆಂಗಳೂರು ಸಿವಿಲು ಅಂಡ್ ಮಿಲಿಟರಿ ಸ್ಟೇಷ್ಷ್ ಬ್ರಾಡ್‌ವೆ ರೋಡಿನಲ್ಲಿದ್ದು ಮೃತಪಟ್ಟ ವೇಸ್ತ್ರಿ ಅಪ್ಪಂಣನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಬೆಂಗಳೂರು ತಾಲ್ಲೂಕು ಉತ್ತರಹಳ್ಳಿ ಹೋಬಳಿ ಜರಗನಹಳ್ಳಿಲಿರುವ 1ನೆ ನಾರಾಯಣಸಾಮಿ, 2ನೆ ವೆಂಕಟ ಸಾಮಿ, ಮೃತಪಟ್ಟ ಸದರೀ ವೇಸ್ತ್ರಿ ಅಪ್ಪಂಣನವರಿಗೆ ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ಸಿವಿಲ್ ಅಂಡ್ ಮಿಲಿಟರಿ ಸ್ಟೇಷ್ಷ್ ಬ್ರಾಡ್‌ವೆ ರೋಡಿನಲ್ಲಿ ವಾಸ್ತವ್ಯರಾಗಿ ಮೃತಪಟ್ಟ ಅಪ್ಪಂಣನವರ ಜೆಂದಗಿ ಬಗ್ಯಾಗಿ ಬರತಕ್ಕ 1,250 ರೂ॥ ಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷ್ಷ್ ಪ್ರಕಾರ ಸರ್ಟಿಫಿಕೇಟ್ ಬ್ಯಾಬ್ತೆ ಈ ಕೋರ್ಟಿಗೆ ಖಾಯಿಷ್ ಮಾಡುತ್ತಾರೆ.

ಸದರೀ ದರಖಾಸ್ತುದಾರರಾದ 1ನೆ ನಾರಾಯಣಸಾಮಿ, 2ನೆ ವೆಂಕಟಸಾಮಿಯವರ ಅರ್ಜಿಯನ್ನು ಸ್ರ 1907ನೆ ಇಸವಿ ನವಂಬರು ತಿಂಗಳು ತಾರೀಖು 1ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಅಪ್ಪಂಣನವರ ಆಸ್ತಿಗೆ ಹಕ್ಕುದಾರರಾದ ವಿಕಿಪ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ರ 1907ನೆ ಇಸವಿ ಅಕ್ಟೋಬರ್ ತಿಂಗಳು 4ನೆ ತಾರೀಖಿನಲ್ಲಿ ಕೋರ್ಟು ಮೊಹರಿನಿಂ ನವ್ಯು ದಸ್ತಖತ್ತೊಡನೆ ಕೊಡೋಹಾಗಿದೆ.

ಟಿ ಇ ಜಯರಾಮು ಐಯ್ಯರ್,
ಅಫಿಷಿಯೇಟಿಂಗ್ ಸಬಾರ್ಡಿನೇಟ್ ಜಡ್ಜ್.

ಮೈಸೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲ್ ಆಫೀಸ್.

ಇಸ್ತಿಹಾರ್ನಾಮೆ

ತಾರೀಖು 14ನೆ ಅಕ್ಟೋಬರ್ 1907ನೆ ಇಸವಿ.

1906ನೆ ಇಸವಿ ನವಂಬರ್ 7ನೆ ಮೈಸೂರು ಮ್ಯುನಿಸಿಪಲ್ ರೆಗ್ಯುಲೇಷ್ಷ್ 8ನೆ ಸೆಕ್ಷ್ಷ್ ಪ್ರಕಾರ ಮೈಸೂರು ಷಹರಿನ ಮ್ಯುನಿಸಿಪಲ್ ಸರಹದ್ದನ್ನು ಈ ಕೆಳಗೆ ನವ್ಯೂದಿಸುವಂತೆ ಬದಲಾಯಿಸಬೇಕೆಂದು ಉದ್ದೇಶಿಸಿ ಇರುತ್ತೆ. ಈ ಬದಲಾವಣೆ ವಿಷಯದಲ್ಲಿ ಆಕ್ಷೇಪಣೆ ಇರತಕ್ಕ ಜನಗಳು ಈ ಇಸ್ತಿಹಾರ್ ತಾರೀಖು ಲಾಗಾಯಿತು ಎರಡು ತಿಂಗಳ ವಳಗಾಗಿ ಮೈಸೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಸಾಹೇಬರವರಿಗೆ ತಮ್ಮ ಆಕ್ಷೇಪಣೆಯನ್ನು ಅದಕ್ಕೆ ಇರತಕ್ಕ ಕಾರಣಗಳೊಡನೆ ಬರಹಮೂಲಕವಾಗಿ ಬರದು ಕೊಳ್ಳತಕ್ಕದ್ದೆಂದು ಇದರಿಂದ ತಿಳಿಯಪಡಿಸಿದೆ.

ಮೈಸೂರು ಷಹರ್ ಸರಹದ್ದು ಮೈಸೂರು-ಇಲವಾಲ್ಪಟ್ಟಣ ರಸ್ತೆ 2ನೆ ಫರ್ಲಾಂಗಿನಿಂದ 270 ಅಡಿ ದೂರದಲ್ಲಿ ನೆಟ್ಟು ಇರುವ ಎಲ್ಲೆ ಕಲ್ಲಿನಿಂದ ಮೊದಲು ಮಾಡಿ ಸರ್ವೆ 75ನೆ ನಂಬರ್ ಜಮ್ಮಿ ಪೂರ್ವ-ಪಶ್ಚಿಮದ ಅಂಚಿನಲ್ಲಿ ಹೊರಟು ಉತ್ತರ ದಿಕ್ಕಿಗೆ ತಿರುಗಿ ಪಡುವಾರಹಳ್ಳಿ ಗ್ರಾಮದ ಸರ್ವೆ 77, 93, 94 ಮತ್ತು 95ನೆ ನಂಬರ್ ಜಮ್ಮಿ ಪೂರ್ವಭಾಗದ ಸರಹದ್ದಿನ ಮಾರ್ಗವಾಗಿ ಹೊರಟು ಪಡುವಾರಹಳ್ಳಿ ಗ್ರಾಮದ ಈಶಾನ್ಯ ಭಾಗದಲ್ಲಿ ಇರುವ ಕಾಲುದಾರಿಯನ್ನು ಸಂಧಿಸಿ ಅದೇ ಗ್ರಾಮದ ಸರ್ವೆ 123ನೆ ನಂಬರ್ ಜಮ್ಮಿ ಪಶ್ಚಿಮ ಭಾಗದ ಅಂಚಿನಲ್ಲಿ ಹೊರಟು ಅದೇ ಗ್ರಾಮದ ಸರ್ವೆ 122ನೆ ನಂಬರ್ ಜಮ್ಮಿ ಆಗ್ನೇಯಭಾಗದ ವರಿಗೂ ಜೀವಣರಾಯನಕಟ್ಟೆ ಹಳ್ಳೀ ನಾಲಾ ಅನುಸರಿಸಿ ಬಂದು ಅಲ್ಲಿಂದ ಉತ್ತರಕ್ಕೆ ತಿರುಗಿ ಸರ್ವೆ 11ನೆ ನಂಬರ್ ಜಮ್ಮಿನಿನ ಪಶ್ಚಿಮ ಭಾಗದಲ್ಲಿ ಬಂದು ಸರ್ವೆ 14ನೆ ನಂಬರ್ ಜಮ್ಮಿ ಸುತ್ತಿಕೊಂಡು ಮಾರಗೌಡನಹಳ್ಳಿ ಗ್ರಾಮದ ಕಾಲದಾರಿಯ ಮಾರ್ಗವಾಗಿ ಉತ್ತರಕ್ಕೆ ತಿರುಗಿ ಪಡುವಾರಹಳ್ಳಿ ಗ್ರಾಮದ ಸರ್ವೆ 15, 16, 17ನೆ ನಂಬರ್ ಜಮ್ಮಿ ಉತ್ತರಭಾಗದ ಎಲ್ಲೆಯನ್ನನುಸರಿಸಿ ಹೊಸ ಬಳಿಗುಳದ ರಸ್ತೆ ದಾಟುತ್ತದೆ. ಇಲ್ಲಿಂದ ಮುಂದೆ ಕಾಲುದಾರಿ ಮಾರ್ಗವಾಗಿ ಉತ್ತರಕ್ಕೆ ತಿರುಗಿ ಮಾರಗೌಡನಹಳ್ಳಿ ಗ್ರಾಮ. ಸರ್ವೆ 29ನೆ ನಂಬರ್ ಜಮ್ಮಿ ಪೂರ್ವಭಾಗದ ಎಲ್ಲೆಯನ್ನನುಸರಿಸಿ ಡಿಟೋ ಸರ್ವೆ 29ನೆ ನಂಬರ್ ಜಮ್ಮಿ ಈಶಾನ್ಯ ಮೂಲೆಯಲ್ಲಿ. ಪೂರ್ವಕ್ಕೆ ತಿರುಗಿ ಕಾಲುದಾರಿ ಮೂಲಕ ಬಂದು ಮಾರಗೌಡನಹಳ್ಳಿ ಗ್ರಾಮದ ಸರ್ವೆ 28, 27, 17 ಮತ್ತು 16ನೆ ನಂಬರ್ ಜಮ್ಮಿನುಗಳ ಉತ್ತರ ದಿಕ್ಕಿನ ಎಲ್ಲೆ ಇಟ್ಟುಕೊಂಡು ಸದರಿ ಗ್ರಾಮದ ಸರ್ವೆ 15ನೆ ನಂಬರ್ ಜಮ್ಮಿ ಈಶಾನ್ಯ ಮೂಲೆಯಲ್ಲಿ ಮೈಸೂರು-ಬೆಂಗಳೂರು ರೈಲು ರಸ್ತೆಯನ್ನು ದಾಟುತ್ತದೆ. ಅಲ್ಲಿಂದ ಪುನಹ ಪೂರ್ವಭಾಗಕ್ಕೆ ಹೊರಟು ಅದೇ ಗ್ರಾಮದ ಸರ್ವೆ 205ನೆ ನಂಬರ್ ಜಮ್ಮಿ ಉತ್ತರಭಾಗದ ಎಲ್ಲೆಯನ್ನನುಸರಿಸಿಕೊಂಡು ಹಳ್ಳಿಬಳಿಗುಳದ ರಸ್ತೆಯಲ್ಲಿರುವ 2ನೆ ನಂಬರ್ ಮ್ಯುನಿಸಿಪಲ್ ಎಲ್ಲೆ ಕಲ್ಲನ್ನು ಕೇರುತ್ತದೆ.

2. ಮುಂದಕ್ಕೆ ಮಾರಗೌಡನಹಳ್ಳಿ ಗ್ರಾಮದ ಸರ್ವೆ 192ನೆ ನಂಬರ್ ಜಮ್ಮಿ ದಕ್ಷಿಣ ಎಲ್ಲೆಯನ್ನನುಸರಿಸಿ ಹೋಗಿ ಸದರಿ 192ನೆ ನಂಬರ್ ಜಮ್ಮಿ ಆಗ್ನೇಯ ಮೂಲೆಯನ್ನು ಕೇರಿ ಬಂದು ಅಲ್ಲಿಂದ ದಕ್ಷಿಣಕ್ಕೆ ತಿರುಗಿ ಸದರಿ ಗ್ರಾಮದ ಸರ್ವೆ 182ನೆ ನಂಬರ್ ಜಮ್ಮಿ ಪಶ್ಚಿಮ ಎಲ್ಲೆ ಇಟ್ಟುಕೊಂಡು ಸದರಿ 182ನೆ ನಂಬರ್ ಜಮ್ಮಿನಿನ ನೈರುತ್ಯ ಮೂಲೆಯನ್ನು ಕೇರುತ್ತದೆ. ಆಮೇಲೆ ಪೂರ್ವಕ್ಕೆ ತಿರುಗಿ ಅದೇ ಗ್ರಾಮದ ಸರ್ವೆ 180, 181, 182ನೆ ಜಮ್ಮಿ ದಕ್ಷಿಣ ಎಲ್ಲೆಯನ್ನನುಸರಿಸಿ ಹೋಗಿ ಪುನಃ ಸರ್ವೆ 180ನೆ ನಂಬರ್ ಜಮ್ಮಿ ಆಗ್ನೇಯದಲ್ಲಿ ತಿರುಗಿ ಸದರಿ 180ನೆ ನಂಬರ್ ಜಮ್ಮಿ ಪೂರ್ವ ಸರಹದ್ದನುಸರಿಸಿ ಉತ್ತರಕ್ಕೆ ಹೋಗಿ ವೀರಣಗೆರೆ ಗ್ರಾಮದ ಸರ್ವೆ 145, 144 ಮತ್ತು 142ನೆ ನಂಬರ್ ಜಮ್ಮಿ ಉತ್ತರ ಎಲ್ಲೆಯಾಗಿ ಹೋಗಿ ಕೋಲ್ ಸಾಹೇಬರಪಾಳ್ಯದ ತೋಟದ ರಸ್ತೆಯನ್ನು ದಾಟುತ್ತದೆ. ಆ ಮೇಲೆ ರಸ್ತೆ ಪೂರ್ವಭಾಗದ ಅಂಚೆನ್ನು ಅನುಸರಿಸಿ ದಕ್ಷಿಣಭಾಗಕ್ಕೆ ಹೊರಟು 1ನೆ ಮೈಲಿ 2ನೆ ಫರ್ಲಾಂಗ್ 3ನೆ ನಂಬರ್ ಮುನಿಸಿಪಲ್ ಎಲ್ಲೆ ಕಲ್ಲನ್ನು ಕೇರುತ್ತದೆ.